ಮೂಲ ದಾವಾ ಸಂಖ್ಯೆ. 211/2016 ಪಿ ಡಬ್ಲ್ಯೂ 4

(ದಿನಾಂಕ 08-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಸಿ ಬಿ ಆರ್ ವಕೀಲರಿಂದಃ-

ನಾನು ನನ್ನ ಮುಖ್ಯ ವಿಚಾರಣಾ ಸಾಕ್ಷ್ಯದ ಕುರಿತು ನ್ಯಾಯಾಲಯದ ಮುಂದೆ ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಇರುತ್ತದೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಸಿ ಎಸ್ ವಕೀಲರಿಂದಃ-

ನಾನು ಮೂಲತಃ ಹೊಸಕೇರಿ ಗ್ರಾಮದವನು. ದಾವಾ ಸ್ವತ್ತು ಯಾವ ಊರಿನಲ್ಲಿದೆ ಎನ್ನುವುದರ ಬಗ್ಗೆ ನನಗೆ ಮಾಹಿತಿ ಇದೆ. ದಾವಾ ಸ್ವತ್ತನ್ನು ಸರ್ಕಾರದವರು ವಾದಿಗೆ ನೀಡಿದ್ದು ಇರುತ್ತದೆ. ಸರ್ಕಾರದವರು ಒಟ್ಟು ಎಷ್ಟು ಜನಕ್ಕೆ ಜಾಗಗಳನ್ನು ಕೊಟ್ಟರೆನ್ನುವುದು ನನಗೆ ಗೊತ್ತಿಲ್ಲ ವಾದಿಗೆ ಕೊಟ್ಟಿದ್ದು ಮಾತ್ರ ನನಗೆ ಗೊತ್ತು. ನಾನಿರುವ ಮನೆ ಜಾಗ ನನ್ನ ಸ್ವಂತ ಜಾಗ ಇರುತ್ತದೆ. ದಾವೆಯನ್ನು ವಾದಿಯು ನಾಗಮ್ಮ ಇವರ ಮೇಲೆ ದಾಖಲಿಸಿದ್ದಾರೆ. ನಾಗಮ್ಮ ಇವರು ಮೂಲತಃ ಹೊಸಕೇರಿ ಗ್ರಾಮದವರಲ್ಲ. ಹೊಟೇಲ್ ಚನ್ನಮ್ಮ ಎನ್ನುವ ಅಜ್ಜಿ ನನಗೆ ಗೊತ್ತಿಲ್ಲ. ನಾನು ಹೊಸಕೇರಿ ಗ್ರಾಮದವನಲ್ಲ ನನಗೆ ಏನೂ ಗೊತ್ತಿಲ್ಲವೆಂದರೆ ಸರಿಯಲ್ಲ. ನಮ್ಮ ಊರು ದಶಮಾಪುರ ಗ್ರಾಮ ಪಂಚಾಯ್ತಿಗೆ ಸೇರಿರುತ್ತದೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಮದ್ಯಾಹ್ನದವರೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ